# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | **ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **227** |
| **ಉತ್ತರಿಸಬೇಕಾದ ದಿನಾಂಕ** | : | **06.12.2023** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈನುಗಾರಿಕೆಯು ನಷ್ಟದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಪಶು ಆಹಾರದ ಬೆಲೆಯು ದಿಢೀರ್ ಹೆಚ್ಚಳ ಮಾಡಿದ ಪರಿಣಾಮ ಹೈನುಗಾರರು ತೊಂದರೆಗೊಳಗಾಗಿದ್ದು, ಹಾಲು ಒಕ್ಕೂಟದ ಈ ನಿರ್ಧಾರ ರೈತರನ್ನು ಹೈನುಗಾರಿಕೆಯಿಂದ ದೂರ ಸರಿಯುವಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಹಾಲು ಮಹಾಮಂಡಳಿಯು ಪಶು ಆಹಾರ ಉತ್ಪಾದನೆಗೆ ಅವಶ್ಯವಿರುವ ಕಚ್ಚಾಪದಾರ್ಥಗಳ ವೆಚ್ಚದ ಆಧಾರದ ಮೇಲೆ ಪಶು ಆಹಾರದ ದರವನ್ನು ನಿಗದಿಪಡಿಸುತ್ತಿದ್ದು, ಅದರಂತೆ ಒಕ್ಕೂಟವು ಖರೀದಿಸಿ, ಜಿಲ್ಲಾ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸರಬರಾಜು ಮಾಡಲಾಗಿರುತ್ತದೆ. ಪಶು ಆಹಾರಕ್ಕೆ ಬಳಸುವ ಕಚ್ಚಾಪದಾರ್ಥಗಳ ದರ ಲಭ್ಯತೆ ಹಾಗೂ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ ಪಶು ಆಹಾರ ಮಾರಾಟ ದರವನ್ನು ಮುಂದಿನ ದಿನಗಳಲ್ಲಿ ಪರಿಷ್ಕರಿಸಲು ಕ್ರಮವಿಡಲಾಗುವುದು.<br><br>ಕರ್ನಾಟಕ ಹಾಲು ಮಹಾಮಂಡಳವು ರಾಜ್ಯದ ಎಲ್ಲಾ ಜಿಲ್ಲಾ ಹಾಲು ಒಕ್ಕೂಟಗಳಿಗೆ ದಿನಾಂಕ:01.04.2020 ರಿಂದ 10.07.2023ರ ಅವಧಿಯ 19 ತಿಂಗಳುಗಳ ಕೋವಿಡ್ 2019ರ ಅವಧಿಯನ್ನು ಒಳಗೊಂಡಂತೆ ಒಟ್ಟು 12,03,103 ಮೆಟ್ರಿಕ್ ಟನ್ ಪಶುಆಹಾರಕ್ಕೆ ಒಟ್ಟಾರೆ ರೂ.185.78/- ಕೋಟಿ ರಿಯಾಯಿತಿ ನೀಡಲಾಗಿದ್ದು, ಅದರಂತೆ ದಕ್ಷಿಣ ಕನ್ನಡ ಹಾಲು ಒಕ್ಕೂಟಕ್ಕೂ ಮೇಲಿನ ಅವಧಿಯಲ್ಲಿ ಸುಮಾರು 1.08 ಲಕ್ಷ ಮೆಟ್ರಿಕ್ ಟನ್ ಪಶು ಆಹಾರವನ್ನು ಖರೀದಿಸಿದ್ದು, ಪ್ರತಿ ಟನ್‌ಗೆ ರೂ.1,583/- ರಂತೆ ಒಟ್ಟು ಅಂದಾಜು ರೂ.17.10 ಕೋಟಿ ಹಣವನ್ನು ಪಶು ಆಹಾರ ಮಾರಾಟದ ಮೇಲೆ ರಿಯಾಯಿತಿಯನ್ನು ನೀಡಲಾಗಿರುತ್ತದೆ. ಸಾಮಾನ್ಯವಾಗಿ ಪ್ರತಿ ಲೀಟರ್ ಹಾಲು ಉತ್ಪಾದನೆಗೆ ಸರಾಸರಿ 250 ಗ್ರಾಂ ಪಶು ಆಹಾರವನ್ನು ಬಳಸಬೇಕಾಗುತ್ತದೆ. ಆದರೆ ಸದರಿ ಜಿಲ್ಲೆಯಲ್ಲಿ ರಾಸುಗಳ ಮೇವಿನ ಕೊರತೆಯಿಂದಾಗಿ ರಾಜ್ಯದ ಇತರೇ ಜಿಲ್ಲೆಗಳ ಹೈನುಗಾರರಿಗೆ ಹೋಲಿಕೆ ಮಾಡಿದಲ್ಲಿ ದ.ಕನ್ನಡ ಹೈನುಗಾರರು ಪ್ರತಿ ಲೀಟರ್ ಹಾಲಿಗೆ ಸರಾಸರಿ 500 ಗ್ರಾಂಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪಶು ಆಹಾರವನ್ನು ಬಳಸುತ್ತಿದ್ದು, ಪ್ರಸ್ತುತ ದಕ್ಷಿನ ಕನ್ನಡ ಹಾಲು ಒಕ್ಕೂಟದಿಂದ ಮಾಹೆಯನಾನ ಸರಾಸರಿ 7000 |

| | | |
|---|---|---|
| | | ಮೆ.ಟನ್ ಪಶು ಆಹಾರ ಬಳಸಲಾಗುತ್ತಿದೆ.<br>ರಾಜ್ಯದ ಇತರೆ ಎಲ್ಲಾ ಹಾಲು ಒಕ್ಕೂಟಗಳಿಗಿಂತ ದಕ್ಷಿಣ ಕನ್ನಡ ಹಾಲು ಒಕ್ಕೂಟವು ಜಿಲ್ಲೆಯ ಹಾಲು ಉತ್ಪಾದಕರಿಗೆ ಹೆಚ್ಚಿನ ದರವನ್ನು ಅಂದರೆ ಪ್ರತಿ ಲೀ. ಹಾಲಿಗೆ ರೂ.35.87 ನೀಡುತ್ತಿದ್ದು. ಅಲ್ಲದೆ. ರಾಜ್ಯ ಸರ್ಕಾರದ ರೂ.5/-ಗಳ ಪ್ರೋತ್ಸಾಹಧನ ಸೇರಿ ರೂ.40.87ದರವನ್ನು ಉತ್ಪಾದಕರಿಗೆ ನೀಡಲಾಗುತ್ತಿದೆ. |
| ಆ | ರಾಸುಗಳಿಗೆ ಕಾಲುಬಾಯಿ ರೋಗ ಸೇರಿದಂತೆ ವಿವಿಧ ಖಾಯಿಲೆಗಳಿಂದ ರೈತರು ಈಗಾಗಲೇ ಕಷ್ಟದಲ್ಲಿದ್ದು. ಈಗ ಏಕಾಏಕಿ ಪಶು ಆಹಾರದ ಬೆಲೆ ಕೂಡ ಏರಿಕೆಯಾಗಿರುವುದರಿಂದ ಬಡರೈತರು ರಾಸುಗಳನ್ನು ಮಾರುವ ಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಪ್ರಸ್ತುತ ಕರ್ನಾಟಕ ಹಾಲು ಮಹಾಮಂಡಳ/ ಒಕ್ಕೂಟದ ವ್ಯಾಪ್ತಿಯ ರಾಸುಗಳಿಗೆ ಕಾಲುಬಾಯಿ ರೋಗ ಕಂಡು ಬಂದಿರುವುದಿಲ್ಲ. ರಾಜ್ಯದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿದ್ದು, ಅದರಂತೆ ಚಿಕಿತ್ಸೆ ನೀಡಲಾಗಿರುತ್ತದೆ. ಎನ್.ಎ.ಡಿ.ಸಿ.ಪಿ. (NADCP-4 – National Animal Disease Control Programme) ರಡಿಯಲ್ಲಿ ರಾಜ್ಯಾದ್ಯಂತ ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ ಹಾಗೂ ಕರ್ನಾಟಕ ಹಾಲು ಮಹಾಮಂಡಳದ ಒಕ್ಕೂಟಗಳ ಮೂಲಕ ಲಸಿಕೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿರುತ್ತದೆ.<br><br>ಪಶು ಆಹಾರ ಉತ್ಪಾದನೆಗೆ ಬಳಸುತ್ತಿರುವ ಮುಖ್ಯ ಕಚ್ಚಾ ಪದಾರ್ಥಗಳಾದ ಮೆಕ್ಕೆ ಜೋಳ, ಅಕ್ಕಿ ತೌಡು, ಹತ್ತಿಕಾಳು ಹಿಂಡಿ ಹಾಗೂ ಕಾಕಂಬಿ ಇವುಗಳ ದರಗಳು ಮಾರುಕಟ್ಟೆಯಲ್ಲಿ ಶೇಕಡ 15 ರಿಂದ 25ರಷ್ಟು ಹೆಚ್ಚಳ ಆಗಿರುವುದರಿಂದ ಇತ್ತೀಚೆಗೆ ಅಕ್ಟೋಬರ್-2023 ರಿಂದ ಪ್ರತಿ ಮೆಟ್ರಿಕ್ ಟನ್ ಪಶು ಆಹಾರಕ್ಕೆ ರೂ.1,000/-ಗಳನ್ನು ಹೆಚ್ಚಿಸಲಾಗಿರುತ್ತದೆ. ಪಶು ಆಹಾರ ಉತ್ಪಾದನೆಗೆ ಬಳಸುವ ಕಚ್ಚಾಸಾಮಗ್ರಿಗಳ ಬೆಲೆಯನ್ನಾಧರಿಸಿ ಮುಂದಿನ ದಿನಗಳಲ್ಲಿ ಮಾರಾಟ ದರವನ್ನು ಪರಿಷ್ಕರಣೆ ಮಾಡಲು ಕ್ರಮವಿಡಲಾಗುವುದು. |
| ಇ | ಸರ್ಕಾರ ಹೈನುಗಾರರ ಸಮಸ್ಯೆಗಳಿಗೆ ಮಧ್ಯ ಪ್ರವೇಶಿಸಿ ಪಶುಆಹಾರಕ್ಕೆ ಸಬ್ಸಿಡಿ ನೀಡಲು ಕ್ರಮಕೈಗೊಳ್ಳುವುದೇ: | ಮೇಲಿನ ಉತ್ತರದಿಂದ ಅನ್ವಯವಾಗುವುದಿಲ್ಲ. |
| ಈ | ಹೈನುಗಾರರ ಈ ಸಮಸ್ಯೆಗೆ ಸ್ಪಂದಿಸದಿದ್ದಲ್ಲಿ. ಹಾಲು ಉತ್ಪಾದನೆ ಕ್ಷೀಣಗೊಂಡು ಸಮಸ್ಯೆ ರೂಪುಗೊಳ್ಳಲು ಸಂದರ್ಭವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು? | ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ಕಳೆದ 2 ವರ್ಷಗಳ ಸರಾಸರಿ ಹಾಲು ಶೇಖರಣೆ 5.04 ಲಕ್ಷ ಲೀಟರ್ ಪ್ರಗತಿ ಸಾಧಿಸಿದ್ದು. ಪ್ರಸ್ತುತ ಸಾಲಿನಲ್ಲಿ ನವೆಂಬರ್-2023ರ ಮಾಹೆಗೆ ಸರಾಸರಿ ಹಾಲು ಶೇಖರಣೆ 4.07 ಲಕ್ಷ ಲೀಟರ್ ಇರುತ್ತದೆ. ರಾಜ್ಯ ಸರ್ಕಾರವು ಹಾಲು ಉತ್ಪಾದಕರನ್ನು ಉತ್ತೇಜಿಸಲು ದಿನಾಂಕ:01.10.2023 ರಿಂದ ಪ್ರತಿ ಲೀ. ಹಾಲು ಮಾರಾಟ ದರವನ್ನು ರೂ.3/-ಗಳಿಗೆ ಹೆಚ್ಚಿಸಿದ್ದು. ಈ ಮೊತ್ತವನ್ನು ಉತ್ಪಾದಕರಿಗೆ ನೇರವಾಗಿ ಪಾವತಿಸಲು ಕ್ರಮವಿಡಲಾಗಿದೆ ಹಾಗೂ ಗುಣಮಟ್ಟದ ಹಾಲು ಶೇಖರಣೆಗೆ ರೂ.5/-ಗಳ ಪ್ರೋತ್ಸಾಹಧನ ರೂಪದಲ್ಲಿ ನೀಡುತ್ತಿರುವುದರಿಂದ |

| | | |
|---|---|---|
| | | ರಾಜ್ಯದ ಹೈನುಗಾರರನ್ನು ಉತ್ತೇಜಿಸಿದಂತಾಗುತ್ತಿದೆ. ರಾಜ್ಯ ಸರ್ಕಾರದ ವತಿಯಿಂದ ಬರ ಪರಿಹಾರ ನಿಧಿಯಿಂದ ಮೇವಿನ ಬೀಜಗಳನ್ನು ಸಹ ವಿತರಿಸಲಾಗುತ್ತಿದೆ. ಕರ್ನಾಟಕ ಹಾಲು ಮಹಾಮಂಡಳ /ಒಕ್ಕೂಟಗಳಿಂದ ಅನೇಕ ತಾಂತ್ರಿಕ ಸೌಲಭ್ಯಗಳಾದ ಪಶು ಆರೋಗ್ಯ, ಲಸಿಕೆ ಕಾರ್ಯಕ್ರಮಗಳು, ಜಂತು ನಿವಾರಕ ಔಷಧಿ, ರಬ್ಬರ್ ಮ್ಯಾಟ್, ಮೇವು ಕತ್ತರಿಸುವಯಂತ್ರ, ಲಿಂಗ ನಿರ್ಧರಿತ ವೀರ್ಯ ನಳಿಕೆ ಸರಬರಾಜು ಹಾಗೂ ಮೇವಿನ ಕಾಂಡಗಳು, ಕಟ್ಟಡ ಅನುದಾನ, ಕಹಾಮವತಿಯಿಂದ ರೋಟರಿ ಕಾಮಧೇನು ಯೋಜನೆಯಡಿ ರಾಸುಗಳ ಖರೀದಿ, ರಾಸು ವಿಮೆ, ಸಂಘಕ್ಕೆ ಬೇಕಾಗಿರುವ ಸಲಕರಣೆಗಳನ್ನು ಅನುದಾನದ ರೂಪದಲ್ಲಿ ನೀಡುತ್ತಿರುವುದರಿಂದ ಹಾಲು ಶೇಖರಣೆ ಹೆಚ್ಚಿಸಲು ಸರ್ಕಾರ ಮತ್ತು ಕಹಾಮದ ಜಿಲ್ಲಾ ಹಾಲು ಒಕ್ಕೂಟಗಳಿಂದ ಕ್ರಮವಿಡಲಾಗಿರುತ್ತದೆ. |

**ಪಸಂಮೀ ಇ-222 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**